ಡಾ॥ ಹೆಚ್.ಸಿ. ಮಹದೇವಪ್ಪ (ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು) :

ಅ) ಖಾನಾಪುರ ತಾಲ್ಲೂಕಿನ ಗುಂಡಪಿ ಗ್ರಾಮವನ್ನು ನಂಜನಕೊಡಲ್ ಗ್ರಾಮ ಪಂಚಾಯಿತಿಯಿಂದ ಬೇರ್ಪಡಿಸಿ ಹಲಸಿ ಗ್ರಾಮ ಪಂಚಾಯಿತಿಗೆ ಸೇರಿಸುವ ಬಗ್ಗೆ ಜನಪ್ರತಿನಿಧಿಗಳಿಂದ ಹಾಗೂ ಸಾರ್ವಜನಿಕರಿಂದ ಸರ್ಕಾರಕ್ಕೆ ಮನವಿಗಳು ಬಂದಿರುತ್ತವೆ.

ಆ) Delimitation Commission of India ಇವರ ಆದೇಶದಂತೆ ಚುನಾವಣಾ ಕ್ಷೇತ್ರಗಳ ಪುನರ್ವಿಂಗಡಣೆ ಕಾರ್ಯವನ್ನು ಮುಂದೂಡಲಾಗಿದೆ.

ಇ) ಇಲ್ಲ.

ಈ) ಪ್ರಶ್ನೆ ಉದ್ಭವಿಸುವುದಿಲ್ಲ.

1144 (1428) ಶ್ರೀ ಈಶ್ವರಪ್ಪ ಕೆ.ಎಸ್. (ಶಿವಮೊಗ್ಗ) ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ಶಿವಮೊಗ್ಗ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಪ್ರಥಮ ದರ್ಜೆ ಕಾಲೇಜು ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ :

ಆ) ಹಾಗಿದ್ದಲ್ಲಿ, ಬಡ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ಏನು ಕ್ರಮ ಕೈಗೊಂಡಿದೆ ;

ಇ) ಪ್ರಥಮ ದರ್ಜೆ ಕಾಲೇಜು ಪ್ರಾರಂಭಿಸಲು ಕೈಗೊಂಡಿರುವ ಕ್ರಮಗಳಾವುವು ?

ಶ್ರೀ ಡಿ. ಮಂಜುನಾಥ್ (ಉನ್ನತ ಸಚಿವರು) :

ಅ) ಬಂದಿದೆ.

ಆ) ಮತ್ತು ಇ) 2005–06ನೇ ಶೈಕ್ಷಣಿಕ ಸಾಲಿನಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಅವಶ್ಯಕತೆ, ಮೂಲಭೂತ ಸೌಕರ್ಯಗಳ ಲಭ್ಯತೆ ಹಾಗೂ ಇಲಾಖೆಯ ಹಣಕಾಸಿನ ಪರಿಸ್ಥಿತಿಯನ್ನು ಗಮನದಲ್ಲಿರಿಸಿಕೊಂಡು ಈ ಪ್ರಸ್ತಾವನೆಯನ್ನು ಪರಿಶೀಲಿಸಲಾಗುವುದು.

1145 (1429) ಶ್ರೀ ಈಶ್ವರಪ್ಪ ಕೆ.ಎಸ್. (ಶಿವಮೊಗ್ಗ) ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ರಾಜ್ಯದಲ್ಲಿ ಬಡವರಿಗೆ ನಿವೇಶನವಿಲ್ಲದೇ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ :

ಆ) ಹಾಗಿದ್ದಲ್ಲಿ, ಆಶ್ರಯ ಯೋಜನೆಯಲ್ಲಿ ಇವರಿಗೆ ನಿವೇಶನ ಹಂಚಿಕೆಯ ಕ್ರಮ ಕೈಗೊಳ್ಳಲಾಗುವುದೇ :

ಇ) ಆಶ್ರಯ ಸಮಿತಿಯಲ್ಲಿ ಇರುವ ಸದಸ್ಯರುಗಳು ಯಾರು ?

ಶ್ರೀ ಅಂಜನಮೂರ್ತಿ (ವಸತಿ ಸಚಿವರು) :

ಅ) ಹೌದು.

ಆ) ಹೌದು.

ಇ) ಆಶ್ರಯ ಸಮಿತಿಯಲ್ಲಿ ಸರ್ಕಾರದ ಆದೇಶ ಸಂಖ್ಯೆ ವಇ 42 ಹೆಚ್ಎಎಂ 99 ದಿನಾಂಕ 10.05.2000ರ ಪ್ರಕಾರ ಈ ಕೆಳಗಿನವರು ಸದಸ್ಯರಾಗಿರಬೇಕು.

1. ವಿಧಾನಸಭಾ ಕ್ಷೇತ್ರವನ್ನು ಪ್ರತಿನಿಧಿಸುವ ವಿಧಾನಸಭಾ ಸದಸ್ಯರು – ಅಧ್ಯಕ್ಷರು
2. ಆ ಪ್ರದೇಶದ ವಿಧಾನ ಪರಿಷತ್ತಿನ ಸದಸ್ಯರು – ಸದಸ್ಯರು
3. (ಅ) ತಾಲ್ಲೂಕು ಪಂಚಾಯತ್‌ನ ಅಧ್ಯಕ್ಷರು – ಸದಸ್ಯರು
   (ಆ) ಪುರಸಭೆ : ನಗರಸಭೆಗಳ ಅಧ್ಯಕ್ಷರು : ಮಹಾನಗರ ಪಾಲಿಕೆಯ ಮಹಾಪೌರರು ಅಥವಾ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಗೆ ಬರುವ ಪಟ್ಟಣ ಪ್ರದೇಶಕ್ಕೆ ಸಂಬಂಧಪಟ್ಟ ಪ್ರದೇಶದ ಮಹಾನಗರ ಪಾಲಿಕೆಯ ಪ್ರತಿನಿಧಿ (ನಗರ ಆಶ್ರಯ ಸಮಿತಿಗಾಗಿ) – ಸದಸ್ಯರು
4. (ಅ) ತಾಲ್ಲೂಕು ಪಂಚಾಯತ್‌ನ ಕಾರ್ಯನಿರ್ವಾಹಕ ಅಧಿಕಾರಿ (ಗ್ರಾಮೀಣ ಆಶ್ರಯ ಸಮಿತಿಗಾಗಿ) – ಸದಸ್ಯ ಕಾರ್ಯದರ್ಶಿ
   (ಆ) ಪುರಸಭೆಯ ಮುಖ್ಯಾಧಿಕಾರಿ ಅಥವಾ ನಗರ ಸಭೆಯ ಆಯುಕ್ತರು (ನಗರ ಆಶ್ರಯ ಸಮಿತಿಗಾಗಿ) – ಸದಸ್ಯ ಕಾರ್ಯದರ್ಶಿ
5. ಸಂಬಂಧಪಟ್ಟ ಕಂದಾಯ ವಿಭಾಗದ ಉಪವಿಭಾಗಾಧಿಕಾರಿ – ಸದಸ್ಯರು
6. ಆಯಾ ತಾಲ್ಲೂಕಿನ ತಹಶೀಲ್ದಾರರು – ಸದಸ್ಯರು

ಅಧಿಕಾರೇತರ ಸದಸ್ಯರು

1. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಪ್ರತಿನಿಧಿ – ಸದಸ್ಯರು
2. ಹಿಂದುಳಿದ ವರ್ಗದ ಪ್ರತಿನಿಧಿ – ಸದಸ್ಯರು
3. ಅಲ್ಪಸಂಖ್ಯಾತರ ಪ್ರತಿನಿಧಿ – ಸದಸ್ಯರು
4. ಬಹು ಸಂಖ್ಯಾತರ ವರ್ಗದ ಪ್ರತಿನಿಧಿ (ಮೇಲಿನ ಅಧಿಕಾರೇತರ ಸದಸ್ಯರುಗಳಲ್ಲಿ ಒಬ್ಬರು ಮಹಿಳೆಯಾಗಿರತಕ್ಕದ್ದು).

ಕರ್ನಾಟಕ ಪಂಚಾಯತ್‌ರಾಜ್ ಕಾಯ್ದೆಗೆ ಸರ್ಕಾರವು ಅಧಿಸೂಚನೆ ಸಂಖ್ಯೆ SAMVYASHAE 33 SHASANA 2002 ದಿನಾಂಕ 22.09.2003ರಲ್ಲಿ ತಿದ್ದುಪಡಿಯನ್ನು ಮಾಡಿದ್ದು ಸದರಿ ತಿದ್ದುಪಡಿಯ ಪ್ರಕಾರ ಆಶ್ರಯ ಮತ್ತು ಅಂಬೇಡ್ಕರ್ ವಸತಿ ಯೋಜನೆಗಳಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡುವ ಕಾರ್ಯವು ಗ್ರಾಮ ಪಂಚಾಯಿತಿಗಳ ಕಾರ್ಯ ವ್ಯಾಪ್ತಿಯಲ್ಲಿ ಬರುತ್ತದೆ. ಸದರಿ ಕಾಯ್ದೆಯಡಿಯಲ್ಲಿ ನಿಯಮಾನುಸಾರ ಆಯ್ಕೆ ಮಾಡಿದ ಪಟ್ಟಿಯು ಅಂತಿಮ ಪಟ್ಟಿಯಾಗಿರುತ್ತದೆ. ಆದ್ದರಿಂದ 2004–05 ರಿಂದ ಆಶ್ರಯ ಸಮಿತಿಗಳನ್ನು ರಚಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಇದಕ್ಕನುಗುಣವಾಗಿ 2004–05ನೇ ಸಾಲಿನಿಂದ ಆಶ್ರಯ ಫಲಾನುಭವಿಗಳ ಆಯ್ಕೆ ಕಾರ್ಯಕ್ರಮ ಅನುಷ್ಠಾನಗೊಳಿಸುವ ಜವಾಬ್ದಾರಿ ಮತ್ತು ಸಾಲವಸೂಲಾತಿ ಇತ್ಯಾದಿ ಜವಾಬ್ದಾರಿಯನ್ನು ಸರ್ಕಾರವು ತನ್ನ ಸುತ್ತೋಲೆ ಸಂಖ್ಯೆ ವಇ 74 ಹೆಚ್‌ಎವೈ 2004 ದಿನಾಂಕ 20.11.2004 ಅನ್ವಯ ಗ್ರಾಮ ಪಂಚಾಯಿತಿಗಳಿಗೆ ವಹಿಸಿದೆ.